

# ಕಾಗದಗಳಲ್ಲಿ ಕಲಾಕೃತಿ ಕೋಲಾರ ಕಲಾವಿದೆಯ ಪರಿಣತಿ






**ನೂರಾರು ಕಾಗದದ ಚೂರುಗಳನ್ನು ಜೋಡಿಸಿ ಕಲಾಕೃತಿಗಳನ್ನು ಅರಳಿಸುವ ಕಲೆಯೇ ಯುನಿಟ್ ಒರಿಗಾಮಿ. ಜಪಾನಿನ ಈ ವಿಶಿಷ್ಟ ಕಲಾಪ್ರಕಾರದಲ್ಲಿ ಪ್ರಯೋಗಗಳನ್ನು ಮಾಡುತ್ತಿದ್ದಾರೆ ಶುಭಂಕರಿ ವಿ. ಶಾಸ್ತ್ರೀ.**

**ಎನ್. ಜಗನ್ನಾಥ್ ಪ್ರಕಾಶ್**

ನಿರ್ದಿಷ್ಟ ಅಳತೆ, ಆಕಾರಗಳ ಪುಟ್ಟ ಪುಟ್ಟ ಮಡಚಿದ ಕಾಗದಗಳಿಂದ ರೂಪುಗೊಳ್ಳುವ ಕಲೆಯೇ 'ಯುನಿಟ್ ಒರಿಗಾಮಿ'. ಜಪಾನಿನಲ್ಲಿ ಅರಳಿದ ಒರಿಗಾಮಿಯ ಒಂದು ಭಾಗವಾದ 'ಯುನಿಟ್ ಒರಿಗಾಮಿ' ಈಗ ಜಪಾನ್‌ಗೆ ಮಾತ್ರ ಸೀಮಿತವಾಗಿಲ್ಲ; ಜಗತ್ತಿನಾದ್ಯಂತ ಜನಾಕರ್ಷಕ ಕಲೆಗಳಲ್ಲಿ ಒಂದಾಗಿ ಬೆಳೆದಿದೆ.

ಕನ್ನಡ ನೆಲದಲ್ಲಿ ಆಗಾಗ ಏರ್ಪಾಡಾಗುವ ಜಪಾನಿ ಹಬ್ಬಗಳಲ್ಲಿ ಕಾಣಸಿಗುವ ಯುನಿಟ್ ಒರಿಗಾಮಿ ಕಲಾಕೃತಿಗಳ ಪ್ರದರ್ಶನದಲ್ಲಿ ಭಾಗವಹಿಸುವ ನಮ್ಮ ನೆಲದ ಕಲಾವಿದರಲ್ಲಿ ಕೋಲಾರದ ಶುಭಂಕರಿ ವಿ. ಶಾಸ್ತ್ರೀ ಅವರೂ ಒಬ್ಬರು.



ಮೊದಮೊದಲು ಹಾಳೆಗಳಲ್ಲಿ ಹಂಸ, ಮೊಲ, ಮುಖವಾಡ ಮೊದಲಾದ ಸಣ್ಣ ಸಣ್ಣ ಕಲಾಕೃತಿಗಳನ್ನು ರೂಪಿಸಲು ಶುರುಮಾಡಿದ ಶುಭಂಕರಿ ಶಾಸ್ತ್ರೀ, ಈಗ ಯುನಿಟ್ ಒರಿಗಾಮಿ ಕರಕುಶಲ ಕಲೆಯಲ್ಲಿ ನವನವೀನ ಪ್ರಯೋಗಗಳಿಗೆ ಹೆಸರುವಾಸಿಯಾಗಿದ್ದಾರೆ.

ವಿವಿಧ ಅಳತೆ, ಆಕಾರಗಳ ಮಡಚಿದ ಕಾಗದಗಳನ್ನು ನಿರ್ದಿಷ್ಟ, ಸಂಕೀರ್ಣ ಕಲಾಕೃತಿಯಾಗಿ ಅನಾವರಣಗೊಳಿಸುವುದೇ ಯುನಿಟ್ ಒರಿಗಾಮಿ ಕಲೆಯ ನೈಪುಣ್ಯ. ಅಪಾರ ಶ್ರಮ, ಏಕಾಗ್ರತೆಯನ್ನು ಬೇಡುವ ಈ ಕರಕುಶಲ ಕಲೆಯನ್ನು